**ಅಧ್ಯಕ್ಷರು:-** ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

2. ವರದಿಗಳನ್ನು ಒಪ್ಪಿಸುವುದು.

**ಶ್ರೀ ಬಸವರಾಜ ಪಾಟೀಲ್ ಅಟ್ಟೂರು:-** ಮಾನ್ಯ ಅಧ್ಯಕ್ಷರೇ ಹಟ್ಟಿ ಚಿನ್ನದ ಗಣಿಯ ಕಂಪನಿ ನಿಯಮಿತದ ಮೇಲೆ 72ನೇ ವರದಿ. 2) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ ಮೇಲೆ 73ನೇ ವರದಿ, 3) ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಗೆ ಸಂಬಂಧಪಟ್ಟಂತೆ 74ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು:-** ಮಂಡಿಸಲಾಗಿದೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಕಮಲಾಪುರ ಮೀಸಲು ಕ್ಷೇತ್ರದಲ್ಲಿನ ನೀರಿನ ಸಮಸ್ಯೆ.

**+ ಶ್ರೀ ರೇವುನಾಯಕ್:-** (ಕಮಲಾಪುರ) ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ನನ್ನದು ಕಮಲಾಪುರ ಮೀಸಲು ಕ್ಷೇತ್ರ ಬರುತ್ತದೆ. ಆದರೆ ಅನೇಕ ಸಲ ನಾನು ಸರ್ಕಾರಕ್ಕೆ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮನವಿಯನ್ನು ಕೊಟ್ಟಿದ್ದೇನೆ. ಇಡೀ ನನ್ನ ಕ್ಷೇತ್ರದಲ್ಲಿ ನೀರಿನ ಹಾಹಾಕಾರ ಎದ್ದಿದೆ. ನನ್ನ ಕ್ಷೇತ್ರದಲ್ಲಿ ನನಗೆ ಆದಷ್ಟು ಮುಖಭಂಗ ಅವಮಾನ ನನ್ನ ಇಡೀ ಜೀವನದಲ್ಲಿ ಇದುವರೆಗೂ ಆಗಿಲ್ಲ ಅಷ್ಟು ಅವಮಾನ ಆಗಿದೆ. ಕಮಲಾಪುರ ಅದು ನನ್ನ ಹೆಡ್ ಕ್ವಾರ್ಟರ್ಸ್. ಅಲ್ಲಿ ಸುಮಾರು 20-30 ಸಾವಿರ ಜನ ಇದ್ದಾರೆ. ಅಲ್ಲಿ ನೀರಿನ ಸಮಸ್ಯೆ ಇದೆ. ಅಂತ ನಾನು ಪದೇ ಪದೇ ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳು ಹೇಳುತ್ತಾರೆ, ನೀವು ಸತ್ಯಾಗ್ರಹ ಕೂತರೆ ನಾನು ನಿಮ್ಮ ಕೆಲಸ ಮಾಡುವಂತೆ ಇಲ್ಲ ಎಂದು ಹೇಳುತ್ತಾರೆ. ಇದನ್ನು ಕರೆದುಕೊಂಡು ಹೋದರೆ ಜನರನ್ನು ಏಕೆ ಕರೆದುಕೊಂಡು ಬರುತ್ತೀರಿ ಎಂದು ಕೇಳುತ್ತಾರೆ. ಮತ್ತೆ ಜಿಲ್ಲಾ ಪಂಚಾಯತಿಯವರನ್ನು ಕೇಳಿದರೆ ನಮಗೆ ದುಡ್ಡು ಕೊಟ್ಟಿಲ್ಲ ನಾವು ಏನು ಮಾಡೋಣ ಎಂದು ಅವರು ಕೇಳುತ್ತಾರೆ. ಕೇಂದ್ರ ಸರ್ಕಾರದ ಒಂದು ಟೀಮ್ ನಮ್ಮ ಕ್ಷೇತ್ರಕ್ಕೆ ಬಂತು, ಬರಗಾಲ ಪೀಡಿತ ಪ್ರದೇಶದ ವೀಕ್ಷಣೆ ಮಾಡುವುದಕ್ಕೆ, ಅಲ್ಲಿ ಸಮೀಕ್ಷೆ ಮಾಡಿದರು. ಕಿನ್ನಸಡಕ್ ಎಂಬ ಒಂದು ಊರು ಇದೆ. ಅಲ್ಲಿ ಅವರು ಒಂದು ಹೊಲಕ್ಕೆ ಭೇಟಿ ಕೊಟ್ಟು ಆ ಹೊಲ ಆಗ ಒಣಗಿತ್ತು. ಆ ಸಮಯದಲ್ಲಿ ಹೆಣ್ಣು ಮಗಳು ಬಂದು ತಮ್ಮ ಎದೆ ಎದೆ ಬಡಿದುಕೊಂಡು ಅವರ ಕಾಲಿಗೆ ಬಿದ್ದು ಅತ್ತಳು.

ಸೆಂಟ್ರಲ್ ಟೀಮಿನವರು ಮೀಟಿಂಗ್ ಮಾಡಿದಂಥ ಸಂದರ್ಭದಲ್ಲಿ, ಇಲ್ಲಿ ಬಹಳ ದುಷ್ಕ ಪರಿಸ್ಥಿತಿ ಇದೆ, ಇದರ ಬಗ್ಗೆ ಕೂಡಲೇ ರಾಜ್ಯ ಸರ್ಕಾರಕ್ಕೆ ಹಣ ಕೊಡುತ್ತೇವೆ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ, ಜನವರಿ ತಿಂಗಳಿನಲ್ಲಿ ಜಾನುವಾರುಗಳಿಗೆ ಮೇವು ಕೊಡಿಸುತ್ತೇವೆಂದು ಹೇಳಿದರು. ದೊಡ್ಡ ರೈತರುಗಳಿಗೆ ಏನು ಮಾಡಲಾಗುತ್ತದೆಂದು ಕೇಳಿದಾಗ, ಈ ಬೇಸಿಗೆ ಕಾಲದಲ್ಲಿ ನಿಮ್ಮ ಹಳ್ಳಿಯಲ್ಲಿರುವ ಎಲ್ಲರಿಗೂ ಕೆಲಸ ಸಿಗುವ ಹಾಗೆ ಬರಗಾಲ

ಕಾಮಗಾರಿಗಳನ್ನು ತೆಗೆದುಕೊಳ್ಳಲು ಏರ್ಪಾಡು ಮಾಡಲಾಗುತ್ತದೆಂದು ಹೇಳಿ ಹೋದರು. ಚೀಫ್ ಸೆಕ್ರೆಟರಿಯವರು ಮತ್ತು ಜಿಲ್ಲಾಧಿಕಾರಿಯವರು, ಮುಂಬಯಿ, ಮಹಾರಾಷ್ಟ್ರ ಮತ್ತು ಬೆಂಗಳೂರು ಕಡೆಗೆ ಕೂಲಿ ಹುಡುಕಿಕೊಂಡು ಹೋಗುವ ಜನರನ್ನು ತಡೆದು ನಾವು ನಿಮಗೆ ಇಲ್ಲೇ ಕೆಲಸ ಕೊಡುತ್ತೇವೆಂದು ಹೇಳಿ ಹೋಗುವುದನ್ನು ತಡೆದರು. ಸೆಂಟ್ರಲ್ ಟೀಮ್ ಬಂದು ಹೋದ ಮೇಲೆ ಜನಗಳಿಗೆ 15 ದಿವಸ ಕೆಲಸ ಕೊಟ್ಟು ನಂತರ ಕೆಲಸ ಕೊಡಲಿಲ್ಲ. ಈಗ ನಾನು ಆ ಭಾಗಗಳಿಗೆ ಹೋದರೆ, ಜನರುಗಳಿಗೆ ಕೆಲಸ ಕೊಡಿಸಲಿಲ್ಲ, ಕುಡಿಯಲು ನೀರು ಕೊಡಿಸಲಿಲ್ಲವೆಂದು ಅಲ್ಲಿನ ಹೆಣ್ಣು ಮಕ್ಕಳು ಖಾಲಿ ಕೊಡಗಳನ್ನು ಎತ್ತಿಕೊಂಡು ನನ್ನ ಘೆರಾವ್ ಮಾಡಿದ್ದರು. ಇದರಿಂದ ನನಗೆ ಬಹಳ ಅವಮಾನವಾಗಿದೆಯೆಂದು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇಂತಹ ಸಮಯದಲ್ಲಿ ನಾನು ಏಕೆ ಎಂ.ಎಲ್.ಎ ಆದೆ ಎಂದು ನನಗೆ ಬಹಳ ಬೇಜಾರಾಗಿದೆ. ನಾನು ಹೊಸದಾಗಿ ಎಂ.ಎಲ್.ಎ. ಆಗಿದ್ದೇನೆ, ನಮ್ಮ ಭಾಗದ ಕಷ್ಟಗಳ ಬಗ್ಗೆ ನಾನು ಪದೇ ಪದೇ ಸರ್ಕಾರದಲ್ಲಿ ಹೇಳಿಕೊಂಡಿದ್ದರೂ ಯಾವುದೇ ನಿಗಾ ವಹಿಸಿಲ್ಲ.

+ ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):– ಮಾನ್ಯ ಶಾಸಕರು ಈ ವಿಚಾರದಲ್ಲಿ ಬಹಳ ಕಳಕಳಿಯಿಂದ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಮಾರ್ಚ್ ತಿಂಗಳಿನಲ್ಲಿ ಪರಿಹಾರ ಹಣವಾಗಿ ಕೇಂದ್ರ ಸರ್ಕಾರದಿಂದ 20 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ ಒಂದು ಕೋಟಿ 20 ಲಕ್ಷ ರೂಪಾಯಿಗಳನ್ನು ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಇದರ ಜೊತೆಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ 8 ಕೋಟಿ ರೂಪಾಯಿಗಳಲ್ಲಿ ಸುಮಾರು 30 ಲಕ್ಷ ಅಥವಾ 40 ಲಕ್ಷ ರೂಪಾಯಿಗಳೂ ಗುಲ್ಬರ್ಗಾ ಜಿಲ್ಲೆಗೆ ಬರುತ್ತದೆ. ಮಾನ್ಯ ಸದಸ್ಯರು ಹೇಳುವಂಥ ಕಡೆ ತಕ್ಷಣದಲ್ಲೇ ಕೆಲಸವನ್ನು ಪ್ರಾರಂಭ ಮಾಡಿ ಜನರುಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಇದೇ ದಿವಸವೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತೆನೆ.

(ಅ) ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಬಡಮಹಿಳೆ ಮೇಲೆ ನಡೆದ ದೌರ್ಜನ್ಯ

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 8ನೇ ತಾರೀಖು ವಿಶ್ವ ಮಹಿಳಾ ದಿನಾಚರಣೆ ನಡೆಯಿತು. ಆ ದಿವಸ ವಿಶ್ವದ ಅನೇಕ ಮಹಿಳಾ ಸಂಘಟನೆಗಳು ಮಹಿಳೆಯರ ಹಕ್ಕುಬಾಧ್ಯತೆ ಬಗ್ಗೆ ಹೋರಾಟ ಮಾಡಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇದೇ ದಿವಸ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಬಡ ಮಹಿಳೆ ಮೇಲೆ ಮಹಿಳೆಯರೇ ದೌರ್ಜನ್ಯ ನಡೆಸಿ ಅವಳನ್ನು ಹೆಣವಾಗಿ ಮಾಡಿರುವ ಒಂದು ಧಾರಣ ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತೀರ್ಥಹಳ್ಳಿ ತಾಲ್ಲೂಕಿನ ಎಡಮನೆ ಗ್ರಾಮದ ನಾಗಪ್ಪಗೌಡ ಎನ್ನುವರನ ಹೆಂಡತಿ ಶ್ರೀಲತಾ ಎನ್ನುವ ಹೆಣ್ಣುಮಗಳು 4ನೇ ತಾರೀಖು ತನ್ನ ಎರಡನೆಯ ಹೆರಿಗೆಗಾಗಿ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಗೆ ಬಂದು ಒಳ ರೋಗಿಯಾಗಿ ಅಡ್ಮಿಟ್ ಆಗಿದ್ದಳು. 8ನೇ ತಾರೀಖಿನ ದಿವಸ ನಾನು ಮಗುವಿನ ಜೊತೆ ಹೋಗುವ ಬದಲು ಹೆಣವಾಗಿ ಹೋಗುತ್ತೇನೆ ಎನ್ನುವ ಕಲ್ಪನೆ ಆಕೆಗೆ ಇರಲಿಲ್ಲ. ವೈದ್ಯರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅಲ್ಲಿದ್ದಂಥ ಮಹಿಳಾ ಸಿಬ್ಬಂದಿಯವರು, ಲಂಚದ ಹಣಕ್ಕಾಗಿ ಆಕೆಗೆ ಹೆರಿಗೆ ನೋವು ಇಲ್ಲದೇ ಇದ್ದರೂ ಕೂಡಾ,